ದಿ: 18-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

**ಮುಂದುವರೆದ ಪಾಟೀಸವಾಲು ಃ ಶ್ರೀಮತಿ ಬಿ.ಆರ್.(ಎಲ್.ಎ.ಡಿ.ಸಿ.), ವಕೀಲರಿಂದ ಪ್ರತಿವಾದಿಯ ಪರವಾಗಿಃ**

2. ಹಿಂದೆ ಕೊಟ್ಟಿರುವ ಸಾಕ್ಷಿಯನ್ನು ನಾನು ತಿಳಿದುಕೊಂಡಿದ್ದೇನೆ. ಬ್ಯಾಂಕ್ ನವರು ನನಗೆ ಕೊಟ್ಟಿದ್ದಂತಹ GPA ಯನ್ನು ನಾನು ಹಾಜರುಪಡಿಸಿದ್ದೇನೆ. ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಬ್ಯಾಂಕ್ ಮ್ಯಾನೇಜರ್ 2019 ರಲ್ಲಿ ಬಾಸ್ಕರ್ ಎಂಬುವವರು ಇದ್ದರು. ಪ್ರತಿವಾದಿಯು ಸಲ್ಲಿಸಿದಂತಹ ತಕರಾರನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಪ್ರತಿವಾದಿಯು ಸಾಲವನ್ನು ದಿಃ 18-06-2020 ರಲ್ಲಿ ಪಡೆದಿರುತ್ತಾರೆ. ಆ ಸಮಯದಲ್ಲಿ ಪ್ರತಿವಾದಿಗೆ 19 ತುಂಬಿತ್ತು. ದಾವಾ ಹಾಕುವ ಕಾಲಕ್ಕೆ ಪ್ರತಿವಾದಿಯ ವಯಸ್ಸು ಎಷ್ಟು ತೋರಿಸಿದ್ದಾರೆ ಅಂತ ನನಗೆ ಗೊತ್ತಿಲ್ಲ ಆಗಿನ ಮ್ಯಾನೇಜರ್ ಹಾಕಿರುತ್ತಾರೆ. ಪ್ರತಿವಾದಿಯು ಸಲ್ಲಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಪ್ರತಿವಾದಿಯು ಎಲ್ಲಿ ಕೆಲಸ ಮಾಡುತ್ತಿದ್ದರು ಎನ್ನುವ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ಪ್ರತಿವಾದಿಯು ಮೇಲ್ವಿಚಾರಕ ಆಗಿ JMC and KC traders ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನನಗೆ ಮಾಹಿತಿ ಇದೆ. ಬಾಸ್ಕರ್, ಕೃಷ್ಣನಾಯ್ಕ ಮತ್ತು ಶಿವುಕುಮಾರವರು ಸ್ನೇಹಿತರು ಅಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ನಮ್ಮ ಮೇಲ್ವಿಚಾರಕರಾಗಿ ಆಗಾಗ ಬರುತ್ತಿದ್ದರು ಅಂದರೆ ಆ ಸಮಯದಲ್ಲಿ ಬಂದಿರಬಹುದು. ಆ ಸಮಯದಲ್ಲಿ ಪ್ರತಿವಾದಿಯು ತಮ್ಮ ಕೆ.ಸಿ. ಟ್ರೇಡರ್ಸ್ ಗೆ ಸಂಬಂಧಿಸಿದ ಚೆಕ್ ಗಳಿಗೆ ಸಹಿ ಮಾಡುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ. ಅದು Firm account ಗೆ ಸಾಲ ಸಂದಾಯವಾಗಿರುವುದರಿಂದ ಬೇರೆ ಬೇರೆ ಖಾತೆಗಳಿಗೆ ಹಣ ಹೋಗಿರಬಹುದು. ಈ ಸಾಲವನ್ನು ಪ್ರತಿವಾದಿಯು ತಮ್ಮ ವೈಯಕ್ತಿಕ ಹೆಸರಿನಲ್ಲಿ ವ್ಯಾಪಾರಕ್ಕಾಗಿ ತೆಗೆದುಕೊಂಡಿದ್ದಾರೆ.

Fake ಖಾತೆಗಳು ಆಗಿರುವ ಬಗ್ಗೆ ಬಾಸ್ಕರ್ ಮತ್ತು ಶಿವಲಿಂಗಯ್ಯರವರ ಮೇಲೆ ಪ್ರಕರಣಗಳು ನಡೆಯುತ್ತಿವೆ ಅಂದರೆ ನನಗೆ ಮಾಹಿತಿ ಇಲ್ಲ. ಸದರಿಯವರು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದು ಅದರ ಮಾಹಿತಿ ನನಗೆ ಗೊತ್ತಿಲ್ಲ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಶಿವಲಿಂಗಯ್ಯರವರು PCR.162/2022 ದಾಖಲು ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ.

ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುವುದರಿಂದ ಮುಂದುವರೆದ ಪಾಟೀ ಸವಾಲವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.